2. The High Court, in its order dated 28-3-84, in respect of a writ petition No. 2901/83 filed by one Sri Srinivasa Bhatta, Supervisor, have quashed the gradation list of Supervisor published by the Director of Survey, Settlement and Land Records in O.M. dated 2. 2. 1983, with direction to prepare a fresh list again, after giving reasonable opportynity to all concerned.

Thereafter, Government, after examination of the matter, issued guidelines to the Director of Survey Settlement and Land Records for preparation of gradation list. But. Hon'ble High Court have issued stay to these guidelines in W.P.NO. 112/85, filed by one Sri Srinivasa Bhatta, Supervisor. However, action has been taken to the stay.

Due to these reasons. the gradation lists could not be finalised and thereby promotions could not be effected.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂವಿಯನ್ನು ಆಕ್ರಮಣ ಮಾಡಿರುವ ಕುರಿತು

೨೮೪ (೭೭೫) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಕ್ರಮಣ ಮಾಡಿಕೊಂಡು ಬೇಸಾಯ ಮಾಡುತ್ತಿರುವವರ ಸಂಖ್ಯೆ ಎಷ್ಟು ?

ಆ) ಈ ರೀತಿಯಾಗಿ ಆಕ್ರಮಣ ಮಾಡಿಕೊಂಡು ಸರ್ಕಾರದ ದಾಖಲೆಯಲ್ಲಿಲ್ಲದವರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ಸಹಿತ)

ಇ) ಈ ರೀತಿಯಾಗಿ ಆಕ್ರಮಣ ಮಾಡಿದ ಭೂಮಿಯನ್ನು ಸಕ್ರಮ ಮಾಡುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಈ) ಹಾಗಿದ್ದಲ್ಲಿ ಇದನ್ನು ಎಂದು ಜಾರಿಗೊಳಿಸಲಾಗುವುದು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೮೮೩೧ ಜನರು ಸರ್ಕಾರಿ ಭೂಮಿಯನ್ನು ಆಕ್ರಮಣ ಮಾಡಿಕೊಂಡು ಬೇಸಾಯ ಮಾಡುತ್ತಿದ್ದಾರೆ.

ಆ) ಈ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಇ) ಪರಿಶೀಲನೆಯಲ್ಲಿದೆ.

ಈ) ಈ ವಿಷಯವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳ ಬೇಕಾಗಿದ್ದರಿಂದ ಕಾಲಮಿತಿ ನಿಗಧಿಪಡಿಸಲು ಆಗದು. ಆದರೂ ಆದಷ್ಟು ಜಾಗ್ರತೆ ನಿರ್ಧಾರ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳ ವೇಳೆ ಮುಗಿಯಿತು.